1. ರೈತರು ಯೋಜಿತ ಬೆಳೆ ಪದ್ಧತಿಗೆ ಬದ್ದರಾಗಿರುವಂತೆ ಜಾಗೃತಿಗೊಳಿಸಲು ಕ್ರಮ ಜರುಗಿಸಲಾಗುವುದು.

2. ಅನಧಿಕೃತ ಪಂಪಸೆಟ್ ಬಳಕೆಯನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು.

3. ಚಿಕ್ಕೋಡಿ ಶಾಖಾ ಕಾಲುವೆಯ ಕಿ.ಮೀ. 1 ರಿಂದ 35ರ ವರೆಗೆ ಆಧುನೀಕರಣ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

4. ಚಿಕ್ಕೋಡಿ ಶಾಖಾ ಕಾಲುವೆಯ ಕಿ.ಮೀ 36 ಮತ್ತು 37ರ ಡಿಪ್‌ಕಟ್ಟಿನ ಇಳಿಜಾರಿನಲ್ಲಿ ಝಾಜ (Jazz) ವರ್ಗೀಕರಣದ ಕಲ್ಲು ಪುಡಿಪುಡಿಯಾಗಿ ಜಾರಿ ಬೀಳುವುದನ್ನು ತಡೆಗಟ್ಟಲು ಭೂ ವಿಜ್ಞಾನಿಯವರಿಂದ ಭೂಸ್ಥಾವರಗಳ ಪರಿಶೀಲನೆ ನಡೆಸಿ ಅವರ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ತಯಾರಿಸಿ ಕ್ರಮ ಜರುಗಿಸಲಾಗುವುದು.

ಭೂ ಪರಿವರ್ತನೆಯಾಗದೆ ಅನಧಿಕೃತ

378(4845); ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)

ಅ) ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಭೂ ಪರಿವರ್ತನೆಯಾಗದೆ ಅನಧಿಕೃತ ಬಡಾವಣೆಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.?

ಆ) ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣದಲ್ಲಿ ಬಡಾವಣೆ ನಿರ್ಮಿಸಲಾಗಿದೆ ಸದರಿ ಬಡಾವಣೆಗಳ ಸರ್ವೆ ನಂಬರು, ಗ್ರಾಮ ಮತ್ತು ವಿಸ್ತೀರ್ಣದ ಮಾಹಿತಿ ಒದಗಿಸುವುದು.?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು.?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಭೂ ಪರಿವರ್ತನೆಯಾಗದೆ ಅನಧಿಕೃತ ಬಡಾವಣೆಗಳನ್ನು ನಿರ್ಮಾಣ ಮಾಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ದೊಡ್ಡಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಭೂಪರಿವರ್ತನೆಯಾಗದೆ ಅನಧಿಕೃತ ಬಡಾವಣೆ ನಿರ್ಮಾಣ ಮಾಡಿರುವ ವಿವರ ಈ ಕೆಳಕಂಡಂತಿರುತ್ತದೆ:–

ಕ್ರ.ಸಂ.	ಗ್ರಾಮ	ಸ.ನಂ.	ವಿಸ್ತೀರ್ಣ	ಖಾತೆದಾರರ ಹೆಸರು
		ದೊಡ್ಡಬಳ್ಳಾಪುರ–ಕಸಬಾ–1		
1	ಕೂಡಿಗೇಹಳ್ಳಿ	43/1	0–20	ಎಂ.ಮುನಿಯಪ್ಪ ಬಿನ್. ಲೇ. ಮುನಿಶಾಮಯ್ಯ
2	ಕೂಡಿಗೇಹಳ್ಳಿ	43/2	0–24	ಎಂ.ಮುನಿಯಪ್ಪ ಬಿನ್. ಲೇ. ಮುನಿಶಾಮಯ್ಯ
3	ಕೂಡಿಗೇಹಳ್ಳಿ	43/3	0–25	ಬಿ.ಸಿ.ನಾರಾಯಣಸ್ವಾಮಿ ಬಿನ್. ಬಿ. ಚಿಕ್ಕಣ್ಣ
4	ಕೂಡಿಗೇಹಳ್ಳಿ	43/4	0–30	ಸರ್ಕಾರಕ್ಕೆ ಮುಟ್ಟುಗೋಲು
5	ಕೂಡಿಗೇಹಳ್ಳಿ	43/5	0–30	ರಾಕೇಶ್‌ಕುಮಾರ್ ಬಿನ್. ಆರ್. ಸುಪ್ರಭಾಲ್
6	ಕುರುಬರಹಳ್ಳಿ	60	0–19	ಟಿ.ಜಿ.ರಮೇಶ್ ಬಿನ್. ಗಂಗಪ್ಪ
7	ಕುರುಬರಹಳ್ಳಿ	60	0–20	ಟಿ.ಜಿ.ವಿಜಯಕುಮಾರ್ ಬಿನ್. ಗಂಗಪ್ಪ
8	ಕುರುಬರಹಳ್ಳಿ	60	0–10	ಟಿ.ಜಿ.ವೆಂಕಟೇಶ್ ಬಿನ್. ಗಂಗಪ್ಪ
9	ಕುರುಬರಹಳ್ಳಿ	60	0–10	ಟಿ.ಜಿ.ಸುರೇಶ್ ಬಿನ್. ಗಂಗಪ್ಪ
10	ಕುರುಬರಹಳ್ಳಿ	60	0–39	ಟಿ.ಆರ್.ಲಕ್ಷ್ಮಮ್ಮ ಕೋಂ. ಮುನಿರಾಜು ಟಿ.ಆರ್.ಮಂಜುಳ
11	ಕುರುಬರಹಳ್ಳಿ	60	0–20	ಟಿ.ಆರ್.ಲಕ್ಷ್ಮಮ್ಮ ಕೋಂ. ಮುನಿರಾಜು
12	ಆಲಹಳ್ಳಿ	13/1	0–31	ವಿ.ನರೇಂದ್ರ ಬಿನ್. ವೆಂಕಟಸ್ವಾಮಿ
13	ಆಲಹಳ್ಳಿ	13/2	1–17	ಬಿ.ಸಿ.ನಂದಕುಮಾರ್ ಬಿನ್. ಬಿ. ಚಿಕ್ಕಮುನಿಯಪ್ಪ
14	ಆಲಹಳ್ಳಿ	14/1ಎಪಿ	3–35	ಅಶ್ವತ್ಥಮ್ಮ ಕೋಂ. ಲೇ. ಮರಿಯಪ್ಪ
15	ಆಲಹಳ್ಳಿ	13/1	1–01	ಎಂ.ಸುರೇಶ್ ಬಿನ್. ಕರಿಬಸಪ್ಪ
16	ಆಲಹಳ್ಳಿ	19/ಪಿ1	2–00	ಕಮಲಮ್ಮ ಕೋಂ. ಕೆ.ಆರ್. ನಾರಾಯಣ
17	ಆಲಹಳ್ಳಿ	19/ಪಿ2	1–33	ಎನ್. ರಮೇಶ್ ಬಿನ್. ಕೆ.ಆರ್. ನಾರಾಯಣ
18	ವೀರಾಪುರ	106	4–02	ಪಟಾಲಮ್ಮ ಕೋಂ. ವಿ.ಟಿ.ವೀರಣ್ಣ
19	ತಿಪ್ಪಾಪುರ	110	1–06½	ಮೈಲಾರಪ್ಪ ಬಿನ್. ಲೇ. ರಾಮಯ್ಯ. ಆನಂದ ಬಿನ್. ಲೇ. ರಾಮಯ್ಯ. ಜಯಶಂಕರಪ್ಪ ಬಿನ್. ಲೇ. ರಾಮಯ್ಯ.
20	ತಿಪ್ಪಾಪುರ	128	0–39	ಎನ್. ಸಿ.ದೇವರಾಜು ಬಿನ್.ಲೇ. ಚನ್ನವೀರಪ್ಪ
21	ಆರೇಹಳ್ಳಿಗುಡ್ಡದಹಳ್ಳಿ	142	2–39	ಅಶ್ವಥರೆಡ್ಡಿ ಬಿಇ. ವೆಂಕಟಸಾಮಪ್ಪ
22	ಪಾಪಾಗಾನಹಳ್ಳಿ	38/1	0–36	ಜಗದೀಶ್ ರಡ್ಡಿ .ಎಂ. ಬಿನ್. ಲೇ. ಮುನಿಯಪ್ಪರಡ್ಡಿ
23	ಪಾಪಾಗಾನಹಳ್ಳಿ	38/2	0–20	ಜಗದೀಶ್ ರಡ್ಡಿ .ಎಂ. ಬಿನ್. ಲೇ. ಮುನಿಯಪ್ಪರಡ್ಡಿ
24	ಪಾಪಾಗಾನಹಳ್ಳಿ	18	0–12ಪಿ	ಜಗದೀಶ್ ರೆಡ್ಡಿ .ಎಂ. ಬಿನ್. ಲೇ. ಮುನಿಯಪ್ಪರಡ್ಡಿ

		ಉತ್ತರ		
		ಹೋಬಳಿ-ಕಸಬಾ-2		
24	ಪಾಲನಹೋಗಿಹಳ್ಳಿ	18	2-00	
25	ಮಲ್ಲತ್ತಹಳ್ಳಿ	97/3	0-37	ಶಮುಮಲ್‌ಪಾಷ ಬಿನ್. ಬಾಬಾಸಾಹೇಬ
26	ಮಲ್ಲತ್ತಹಳ್ಳಿ	96	0-339	ನರಸಿಂಹಯ್ಯ ಬಿನ್. ಪಾಪಯ್ಯ
		ಹೋಬಳಿ- ದೊಡ್ಡಬೆಳವಂಗಲ		
27	ಮಧುರನ ಹೊಸಹಳ್ಳಿ	89/1	0-38	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು.
28		89/2	0-38	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
29		90/1	0-20	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
30		90/3	0-20	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
31		90/4	0-20	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
32		91/2	0-15	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
33		91/3	0-20	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
34		21	2-23	ಎಸ್.ಸಂಜಯ್‌ಬಾಬು ಬಿನ್. ಎಸ್.ವಿ.ಬಾಬು
		ಹೋಬಳಿ- ಮಧುರೆ		
35	ರಾಮದೇವನಹಳ್ಳಿ	123/4	1-26	ಜಿ.ಕಿಮ್ಮಯ್ಯ ಬಿನ್. ಲೇ. ಗರಡಿಸಿದ್ದಯ್ಯ
36	ಮ್ಯಾರಸಂದ್ರ	73/10	0-12	ಸಾಗರಾಜು ಬಿನ್. ಸುಬ್ಬಯ್ಯ
37		73/10	0-11	ಶಿವಕುಮಾರ್ ಬಿನ್. ಸುಬ್ಬಯ್ಯ.
38		73/10	0-11	ಮಂಜುನಾಥ್ ಬಿನ್. ಸುಬ್ಬಯ್ಯ
39		73/10	0-10	ಸೂರ್ಯಪ್ರಕಾಶ್ ಬಿನ್. ಸುಬ್ಬಯ್ಯ
40	ಕೋಡಿಹಳ್ಳಿ	127/1	3-08	ಕಾಮಾಕ್ಷಮ್ಮ ಕೋಂ. ಎಸ್. ತಮ್ಮಯ್ಯ
41	ಹಾಲೇನಹಳ್ಳಿ	3/1	0-27	ಸಚ್ಚಿದಾನಂದ ಬಿನ್. ನಂಜುಂಡಯ್ಯ
42		3/2	1-30	ನರಸಿಂಹಯ್ಯ ಬಿನ್. ಮುನಿಯಪ್ಪ
43		4/1	1-13	ಸಚ್ಚಿದಾನಂದ ಬಿನ್. ನಂಜುಂಡಯ್ಯ
44		4/2	2-05	ನರಸಿಂಹಯ್ಯ ಬಿನ್. ಮುನಿಯಪ್ಪ
45		4/3	1-17	ನರಸಿಂಹಯ್ಯ ಬಿನ್. ಮುನಿಯಪ್ಪ
46	ದೊಡ್ಡತುಮಕೂರು	86/1	1-06	ಚನ್ನೇಗೌಡ ಬಿನ್. ಲೇ. ಚನ್ನರಾಯಪ್ಪ

ಇ) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 96ರಂತೆ ಕ್ರಮ ಕೈಗೊಳ್ಳಲಾಗುವುದು.

ದೈವಿವನ ಅಭಿವೃದ್ಧಿ

379(3620); ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ (ಸವದತ್ತಿ ಯಲ್ಲಮ್ಮ)

ಅ) ಯಲ್ಲಮ್ಮಗುಡ್ಡದಲ್ಲಿರುವ ದೈವಿ ವನವನ್ನು ಪೂರ್ಣವಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಅರಣ್ಯ ಇಲಾಖೆಗೆ ಅನುದಾನ ಬಿಡುಗಡೆ ಮಾಡಿದಿಯೇ; ದೈವಿ ವನ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಪಡಿಸಲು ಸರ್ಕಾರವು ಯಾವ ಕಾಲಮಿತಿ ನಿಗದಿಪಡಿಸಿದೆ; (ವಿವರ ನೀಡುವುದು);

ಆ) ಮಲ್ಲಮ್ಮನ ಗುಡ್ಡದಲ್ಲಿರುವ ದೈವಿವನವು ಅರಣ್ಯ ಅಭಿವೃದ್ಧಿಗೆ ಹೆಚ್ಚು ಉಪಯುಕ್ತವಾಗಿರುವ ಹಿನ್ನೆಲೆಯಲ್ಲಿ ಇನ್ನು ಎಷ್ಟು ಇಂತಹ ದೈವಿ ವನಗಳನ್ನು ಸವದತ್ತಿ ಕ್ಷೇತ್ರದಲ್ಲಿ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಗೋಕಾಕ್ ವಿಭಾಗದ ಸವದತ್ತಿ ತಾಲ್ಲೂಕಿನ ಯಲ್ಲಮ್ಮನಗುಡ್ಡದಲ್ಲಿರುವ ದೈವಿವನವನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಮಾಡಲಾಗಿದೆ ಹಾಗೂ ಸದರಿ ನಿರ್ಮಾಣಕ್ಕೆ ಸರ್ಕಾರ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ.

ಕ್ರಸಂ	ವರ್ಷ	ಬಿಡುಗಡೆಯಾದ ವಾರ್ಷಿಕ ಅನುದಾನ (₹ ಲಕ್ಷಗಳಲ್ಲಿ)	ವೆಚ್ಚ ಭರಿಸಿದ ಅನುದಾನ (₹ ಲಕ್ಷಗಳಲ್ಲಿ)
1	2011–12	104.00	104.00
2	2012–13	53.59	53.59
3	2013–14	3.00	3.00